ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ, ಶ್ರೀರಂಗಪಟ್ಟಣ.

ಕ್ರಿಮಿನಲ್ ಮೊಕದ್ದಮೆ ಸಂಖ್ಯೆ **: 35/2025**

ಚಾ.ಸಾ. **:-2**
ಪ್ರಾ.ಸಾ. **:-2**

| | |
|---|---|
| ಹೆಸರು | : ನಾಗರಾಜು |
| ತಂದೆಯ ಹೆಸರು | : ಕೃಷ್ಣೇಗೌಡ |
| ವಯಸ್ಸು | : 52 ವರ್ಷ |
| ಉದ್ಯೋಗ | : ವ್ಯವಸಾಯ |
| ವಾಸಸ್ಥಳ | : ಗಣಂಗೂರು ಗ್ರಾಮ |

---

ಪ್ರಮಾಣೀಕರಿಸಲಾದ ದಿನಾಂಕ**- 21.07.2026**

ಮುಖ್ಯ ವಿಚಾರಣೆ **:** ಮಾನ್ಯ ಸ.ಸ.ಅ.ರವರಿಂದ **:**

ಮೃತ ಹನುಮಂತಪ್ಪ ಪರಿಚಯವಿಲ್ಲ, ಅಪಘಾತವಾದ ದಿವಸ ಅವರನ್ನು ನೋಡಿರುತ್ತೇನೆ. ಚಾ.ಸಾ-1, 3 ಮತ್ತು 4 ಪರಿಚಯ. ಸ್ಥಳದಲ್ಲಿ ಅಪಘಾತಪಡಿಸಿದ ವಾಹನದ ಚಾಲಕನನ್ನು ನೋಡಿರುತ್ತೇನೆ. ದಿನಾಂಕಃ 28.05.2025 ರಂದು ನಾನು ಮತ್ತು ಚಾ.ಸಾ-1 ರವರು ಮೈಸೂರು-ಬೆಂಗಳೂರು ಹೆದ್ದಾರಿಯ ಸರ್ವೀಸ್ ರಸ್ತೆಯಲ್ಲಿ ಗಣಂಗೂರಿನ ಬಳಿ ನಿಂತಿದ್ದೆವು. ಆಗ ಮೈಸೂರು ಕಡೆಯಿಂದ ಬಂದಂತಹ ಗೂಡ್ಸ್ ವಾಹನ ವೇಗವಾಗಿ ಬಂದಿದ್ದು, ಅಲ್ಲಿ ರಸ್ತೆ ಉಬ್ಬು ಇದ್ದು ಆ ಜಾಗದಲ್ಲಿ ವಾಹನವನ್ನು ನಿಧಾನ ಮಾಡಿರುವುದಿಲ್ಲ, ಹಾಗೆಯೇ ವಾಹನ ಚಾಲನೆ ಮಾಡಿದ್ದು, ರಸ್ತೆ ಉಬ್ಬು ದಾಟಿದ ತಕ್ಷಣ ಸದರಿ ವಾಹನದ ಎಡಭಾಗದ ಬಾಗಿಲು ತೆಗೆದುಕೊಂಡಿರುತ್ತದೆ. ಆ ಸಮಯದಲ್ಲಿ ಬಾಗಿಲು ಪಕ್ಕ ಕುಳಿತಿದ್ದ ವ್ಯಕ್ತಿ ಕೆಳಕ್ಕೆ ಬಿದ್ದಿರುತ್ತಾರೆ. ನಾವುಗಳು ಹೋಗಿ ನೋಡಿದಾಗ ಕೆಳಕ್ಕೆ ಬಿದ್ದಿದ್ದ ವ್ಯಕ್ತಿಗೆ ಕೈಗೆ, ಕಾಲಿಗೆ, ತಲೆಗೆ

ಗಾಯಗಳಾಗಿರುತ್ತವೆ. ಕೆಳಗೆ ಬಿದ್ದಿದ್ದ ವ್ಯಕ್ತಿ ಆತನ ಹೆಂಡತಿಗೆ ದೂರವಾಣಿ ಕರೆ ಮಾಡುವಂತೆ ನಮಗೆ ತಿಳಿಸಿದ್ದು, ನಾನು ಆತನ ಮೊಬೈಲ್ ನಿಂದ ದೂರವಾಣಿ ಕರೆ ಮಾಡಿರುತ್ತೇನೆ. ನಂತರ ಆ್ಯಂಬುಲೆನ್ಸ್ ಮೂಲಕ ಗಾಯಾಳುವನ್ನು ಆಸ್ಪತ್ರೆಗೆ ಕಳುಹಿಸಿಕೊಟ್ಟಿರುತ್ತೇವೆ. ಆ ಸಮಯದಲ್ಲಿ ಸದರಿ ಗೂಡ್ಸ್ ವಾಹನದ ಚಾಲಕ ಸಹ ಸ್ಥಳದಲ್ಲೇ ಇದ್ದರು. ನಂತರದಲ್ಲಿ ಗಾಯಾಳು ಮೃತಪಟ್ಟ ಬಗ್ಗೆ ಗೊತ್ತಾಗಿರುತ್ತದೆ.

ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ. ಈ ದಿನ ಆರೋಪಿ ಗೈರು ಹಾಜರಾಗಿದ್ದು, ಆರೋಪಿಯ ಗುರುತಿಸುವಿಕೆಯ ಬಗ್ಗೆ ತಕರಾರು ಇರುವುದಿಲ್ಲವೆಂದು ಆರೋಪಿ ಪರ ವಕೀಲರು ತಿಳಿಸಿರುತ್ತಾರೆ.

ನಿಪಿ-4 ರಲ್ಲಿ ಅಪಘಾತಪಡಿಸಿದ ವಾಹನ ಕಾಣಿಸುತ್ತದೆ.

ನನ್ನ ಅಭಿಪ್ರಾಯದಲ್ಲಿ ವಾಹನ ಚಾಲಕನ ತಪ್ಪಿನಿಂದ ಅಪಘಾತವಾಗಿರುತ್ತದೆ, ಅವರು ವೇಗವಾಗಿ ವಾಹನ ಚಾಲನೆ ಮಾಡಿದ ಕಾರಣ ಅಪಘಾತವಾಗಿರುತ್ತದೆ. ನಾನು ಪೊಲೀಸರಿಗೆ ಅಪಘಾತದ ಬಗ್ಗೆ ಹೇಳಿಕೆ ಕೊಟ್ಟಿರುತ್ತೇನೆ.

**ಆರೋಪಿ ಪರ ವಕೀಲರು ಪಾಟೀ ಸವಾಲಿಗೆ ಸಮಯ ಕೋರಿದ್ದು, ರೂ.500/- ಖರ್ಚಿನ ಸಮೇತ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಈ ದಿನ ಬೆರಳಚ್ಚು ಮಾಡಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ ಎಂದು ಓದಲಾಗಿದೆ.

ಪ್ರಧಾನ ಹಿರಿಯ ಸಿಜೆ ಮತ್ತು
ಜೆ.ಎಂ.ಎಫ್.ಸಿ., ಶ್ರೀರಂಗಪಟ್ಟಣ.

**ಸಾಕ್ಷಿದಾರರ ಸಹಿ.**